**ಓ.ಎಸ್. ನಂ. 312/2012 ಪಿ.ಡಬ್ಲೂ-1 ಹೆಸರು - ಮಹದೇವಮ್ಮ**

**ಸಾಕ್ಷಿಯನ್ನು ದಿನಾಂಕಃ 10/01/2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಎನ್.ಎಸ್. ವಾದಿ ಪರ ವಕೀಲರಿಂದಃ-**

ನಿಪಿ-26 ಮತ್ತು ನಿಪಿ-27 ದಾಖಲಾತಿಗಳಲ್ಲಿ ನಾನಾಗಲೀ, ನನ್ನ ಗಂಡನಾಗಲೀ ಮತ್ತು ಪ್ರತಿವಾದಿಯಾಗಲೀ ಪಕ್ಷಗಾರರಿರಲಿಲ್ಲ ಎಂದರೆ ಸರಿಯಲ್ಲ. FDP No. 13/2004 ರಲ್ಲಿ ನನ್ನ 5 ಗುಂಟೆ ಕೂಡ ಸೇರಿಸಲಾಗಿದೆ. FDP No. 13/2004 ರ ಷೆಡ್ಯೂಲ್ ಸ್ವತ್ತಿನ ಸರ್ವೆ ನಂಬರ್ ಮತ್ತು ಆಸ್ತಿ ನಂಬರ್ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 289/2 ಎ ಸ್ವತ್ತಿಗೂ ಮತ್ತು ಸರ್ವೆ ನಂಬರ್ 289/1 ಎ ಸ್ವತ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-27 ರಲ್ಲಿ ತೋರಿಸಿರುವ ಸರ್ವೆ ನಂಬರ್ 289/2 ಎ ರಲ್ಲಿನ ಸ್ವತ್ತು ಪ್ರತಿವಾದಿಗೆ ಸೇರಿದ ಸರ್ವೆ ನಂಬರ್ 289/1 ಎ ಸ್ವತ್ತಿನ ದಕ್ಷಿಣ ಭಾಗದಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-27 ರಲ್ಲಿ ತೋರಿಸಿರುವ ಚೆಕ್ಕು ಬಂಧಿಯು ಪ್ರತಿವಾದಿಯು ಸ್ವಾಧೀನದಲ್ಲಿ ಇರುವ ಸ್ವತ್ತಿಗೆ ಒಳಪಡುವ ಚೆಕ್ಕುಬಂಧಿ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಸ್ವತ್ತು ಎಲ್ಲಿ ಬರುತ್ತದೆ ಎಂದು ಗೊತ್ತಿರದೇ ನಿಪಿ-27 ರ ದಾಖಲೆಯಲ್ಲಿ ಇರುವ ಸ್ವತ್ತಿನ ಪಕ್ಕದಲ್ಲಿ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-26 ಮತ್ತು ನಿಪಿ-27 ದಾಖಲಾತಿಗಳು ಮತ್ತು ನಾನು ಹಾಜರುಪಡಿಸಿರುವ ದಾಖಲೆಗಳು ಒಂದಕ್ಕೊಂದು ತಾಳೆ ಯಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರದ ಕಾರಣ, ದಾವೆಗೆ ಸಂಬಂಧಪಡದ ನಿಪಿ-26 ಮತ್ತು ನಿಪಿ-27 ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.
ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**